# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ಹೊಸ ಶಾಖಾ ಕೇಂದ್ರಗಳು: ೧. ಝೂರಗ್ರಾಮ:** ಪಶ್ಚಿಮ ಬಂಗಾಳದ ಝೂರಗ್ರಾಮದಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲೆ (EMRS) ಹಾಗೂ ಸಮೀಪದ ಜಮೀನಿನಲ್ಲಿ ರಾಮಕೃಷ್ಣ ಮಿಷನ್ನಿನ ಹೊಸ ಕೇಂದ್ರವು ಆರಂಭವಾಯಿತು. ಈ ಮೊದಲು ಸರ್ಕಾರವೇ ನಡೆಸುತ್ತಿದ್ದ ಈ ಶಾಲೆಯನ್ನು ರಾಮಕೃಷ್ಣ ಮಿಷನ್ನಿಗೆ ಹಸ್ತಾಂತರಿಸಿದ ಬಳಿಕ ಇದನ್ನು ''ರಾಮಕೃಷ್ಣ ಮಿಷನ್ ವಿದ್ಯಾಮಂದಿರ (EMRS)'' ಎಂದು ಮರು ನಾಮಕರಣ ಮಾಡಲಾಯಿತು.



ಲಮ್‌ಡಂಗ್ ಗ್ರಾಮ

**೨. ಲಮ್‌ಡಂಗ್:** ಅರುಣಾಚಲ ಪ್ರದೇಶದ ಪೂರ್ವ ಕಮೆಂಗ್ ಜಿಲ್ಲೆಯ ಲಮ್‌ಡಂಗ್ ಗ್ರಾಮದ ೩೬ ಎಕರೆ ಪ್ರದೇಶದಲ್ಲಿ ರಾಮಕೃಷ್ಣ ಮಿಷನ್ನಿನ ಹೊಸ ಶಾಖಾಕೇಂದ್ರವು ಆರಂಭವಾಯಿತು. ಲಮ್‌ಡಂಗ್ ಪ್ರದೇಶದ ಜನತೆ ಹಾಗೂ ನಾಂಫೀ ನಾಟುಂಗ್ ಮೊಯಾ ತಾಥಾ ವೆಲ್ಫೇರ್ ಸೊಸೈಟಿ ಈ ಜಮೀನನ್ನು ದಾನವಾಗಿ ನೀಡಿದೆ.

೩. ಕೊಲ್ಕತ್ತದ **ನ್ಯೂ ಟೌನ್**ನಲ್ಲಿ ಪಶ್ಚಿಮ ಬಂಗಾಳ ಸರ್ಕಾರ ನೀಡಿದ ಐದು ಎಕರೆಯ ಜಮೀನಿನಲ್ಲಿ ರಾಮಕೃಷ್ಣ ಮಿಷನ್ನಿನ ಹೊಸ ಶಾಖಾಕೇಂದ್ರವು ಆರಂಭವಾಯಿತು. 'ರಾಮಕೃಷ್ಣ ಮಿಷನ್ ಕಲ್ಚರ್ ಫಾರ್ ಹ್ಯೂಮನ್ ಎಕ್ಸೆಲೆನ್ಸ್' ಎಂಬ ಹೆಸರಿನಿಂದ ಆರಂಭವಾದ ಈ ಕೇಂದ್ರದ ಕಟ್ಟಡ ನಿರ್ಮಾಣ ಕಾರ್ಯಗಳು ಆರಂಭವಾಗಿವೆ.



## ಸೋದರಿ ನಿವೇದಿತಾ ಅವರ ೧೫೦ನೇ ಜಯಂತ್ಯುತ್ಸವ

ಸೋದರಿ ನಿವೇದಿತಾ ಅವರ ೧೫೦ನೇ ಜಯಂತಿ ಉತ್ಸವದ ಅಂಗವಾಗಿ ಹಲವು ಶಾಖಾ ಕೇಂದ್ರಗಳಲ್ಲಿ ವಿವಿಧ ಕಾರ್ಯಕ್ರಮಗಳು ನಡೆದವು. **ಆಂಟ್‌ಪುರ ಕೇಂದ್ರ**ವು ಜುಲೈ ೩೦ರಂದು ನಡೆಸಿದ **ಯುವ ಸಮ್ಮೇಳನ**ದಲ್ಲಿ ೧೫೩ ಮಂದಿ ಯುವಕರು ಭಾಗವಹಿಸಿದರು.

**ಚೆನ್ನೈನ ರಾಮಕೃಷ್ಣ ಮಠ**ವು ತಿರುವಣ್ಣಾಮಲೈ ಜಿಲ್ಲೆಯ ಚೆಂಗಂ ಎಂಬಲ್ಲಿ ವಿದ್ಯಾರ್ಥಿಗಳಿಗಾಗಿ ಆಗಸ್ಟ್ ೧೧ರಂದು ನಡೆಸಿದ ಸಮ್ಮೇಳನದಲ್ಲಿ ೨೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ಕೊಯಮತ್ತೂರು ಮಿಷನ್ ವಿದ್ಯಾಲಯ**ವು ಕೊಯಮತ್ತೂರಿನ ಸಮೀಪದ ೩ ಹಳ್ಳಿಗಳಲ್ಲಿ ಆಗಸ್ಟ್ ೨ ಹಾಗೂ ೧೬ರಂದು ನಡೆಸಿದ **ರಸಪ್ರಶ್ನೆ ಸ್ಪರ್ಧಾ ಕಾರ್ಯಕ್ರಮ**ದಲ್ಲಿ ೩೦೨ ಮಂದಿ (ಬಹುತೇಕ ವಿದ್ಯಾರ್ಥಿಗಳು) ಭಾಗವಹಿಸಿದರು.

**ಲಾಲ್‌ಘರ್ ಆಶ್ರಮ**ವು ಏಪ್ರಿಲ್ ೨೫, ೨೬ರಂದು ಮೆರವಣಿಗೆ, ಸಾಂಸ್ಕೃತಿಕ ಸ್ಪರ್ಧೆ ಹಾಗೂ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿತು. **ಸೇಲಂ ಆಶ್ರಮ**ವು ಜುಲೈ ೧೩ರಿಂದ ಆಗಸ್ಟ್ ೧೮ರ ವರೆಗೆ ಸೇಲಂ ಸುತ್ತಣ ಪ್ರದೇಶದ ಆರು ಶಾಲೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಡೆಸಿತು. ಸುಮಾರು ೧೪೭೨ ಮಂದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇದರಲ್ಲಿ ಭಾಗವಹಿಸಿದ್ದರು. ಆಶ್ರಮವು ಆಗಸ್ಟ್ ೨೮ರಂದು ಒಂದು **ಯುವ ಸಮ್ಮೇಳನ**ವನ್ನೂ ನಡೆಸಿತು. ಇದರಲ್ಲಿ ೯೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ಶಾರದಾಪೀಠವು** ಬೇಲೂರು ಹಾಗೂ ರಹರಾದಲ್ಲಿರುವ ಎರಡು ಬಾಲಕಿಯರ ಶಾಲೆಗಳಲ್ಲಿ ಆಗಸ್ಟ್ ೧೭ ಹಾಗೂ ೧೮ ರಂದು **ವಿಚಾರ ಸಂಕಿರಣ**ಗಳನ್ನು ನಡೆಸಿತು. ಸುಮಾರು ೫೦೦ ಮಂದಿ ವಿದ್ಯಾರ್ಥಿನಿಯರು ಹಾಗೂ ೫೦ ಮಂದಿ ಅಧ್ಯಾಪಕರು ಇದರಲ್ಲಿ ಪಾಲ್ಗೊಂಡಿದ್ದರು. **ಸರೀಷ ಆಶ್ರಮ**ವು ಜುಲೈ ೧ರಂದು ವಿವಿಧ ಶಾಲೆಗಳಲ್ಲಿ ನಡೆಸಿದ **ಅಧ್ಯಾಪಕರ ವಿಚಾರ ಸಂಕಿರಣ**ದಲ್ಲಿ ೬೫ ಮಂದಿ ಅಧ್ಯಾಪಕರು ಭಾಗವಹಿಸಿದ್ದರು. **ಸ್ವಾಮಿ ವಿವೇಕಾನಂದರ ನಿವಾಸ**ವು ಜುಲೈ ೨೮ರಿಂದ ಆಗಸ್ಟ್ ೯ರ ಅವಧಿಯಲ್ಲಿ ಮೂರು ಪ್ರದೇಶಗಳಲ್ಲಿ ನಾಲ್ಕು **ಪ್ರವಚನ ಕಾರ್ಯಕ್ರಮ**ಗಳನ್ನು ಏರ್ಪಡಿಸಿತು. ಇದರಲ್ಲಿ ೧೪೧೦ ಮಂದಿ ಭಾಗವಹಿಸಿದ್ದರು. ಇದೇ ಸಮಯದಲ್ಲಿ ಕೊಲ್ಕತ್ತದ ಪ್ರದೇಶಗಳಲ್ಲಿ ಮೂರು ಪ್ರವಚನಗಳನ್ನು ಕೇಂದ್ರವು ಏರ್ಪಡಿಸಿತು. ಇದರಲ್ಲಿ ಸುಮಾರು ೧೦೦೦ ಮಂದಿ ಭಾಗವಹಿಸಿದರು. **ವಾರಣಾಸಿ ಸೇವಾಶ್ರಮ**ವು ಆಗಸ್ಟ್ ೨೭ರಂದು **ಭಕ್ತಿ ಸಂಗೀತ ಕಾರ್ಯಕ್ರಮ**ವನ್ನು ನಡೆಸಿತು.



ಉಚಿತ ನೇತ್ರ ಚಿಕಿತ್ಸಾ ಶಿಬಿರ

**ಉಚಿತ ನೇತ್ರ ಚಿಕಿತ್ಸಾ ಶಿಬಿರಗಳು:** ಬಂಕುರ, ವರ್ಧಮಾನ, ಚೆನ್ನೈ ಮಠ, ದೆಹಲಿ, ಘಾಟ್‌ಶಿಲಾ, ಹಲಸೂರು, ಕಾಮಾರಪುಕುರ, ಕಾನ್‌ಪುರ, ಲಕ್ನೋ, ಮದುರೈ, ಮಾಯಾವತಿ, ಮೇದಿನೀಪುರ, ಪೋರ್ ಬಂದರ್, ರಾಜಾಮುಂಡ್ರಿ, ರಾಜ್‌ಕೋಟ್, ರಾಂಚಿ ಮೊರಬಾದಿ, ಸೇಲಂ, ಸೇವಾ ಪ್ರತಿಷ್ಠಾನ, ಸಿಲ್‌ಚಾರ್ ಕೇಂದ್ರಗಳು **ಉಚಿತ ನೇತ್ರ ಚಿಕಿತ್ಸಾ ಶಿಬಿರ**ಗಳನ್ನು ನಡೆಸಿದವು. ಇವುಗಳಲ್ಲಿ ಸುಮಾರು ೨೫,೦೦೦ಕ್ಕೂ ಹೆಚ್ಚು ಮಂದಿ ತಪಾಸಣೆ ನಡೆಸಿದರು.

**ನೈತಿಕ ಶಿಕ್ಷಣ ಹಾಗೂ ಯುವಕರಿಗಾಗಿ ಕಾರ್ಯಕ್ರಮ:** ದೆಹಲಿ ಆಶ್ರಮವು ಆಗಸ್ಟ್ ೨ರಿಂದ ೩೦ರವರೆಗೆ ೧೬ **ನೈತಿಕ ಶಿಕ್ಷಣ ಶಿಬಿರ**ಗಳನ್ನು ಆಯೋಜಿಸಿತು. ೮ ರಾಜ್ಯಗಳಲ್ಲಿ ಹಾಗೂ ದೆಹಲಿ, ಚಂಡೀಗಢಗಳಲ್ಲಿ ನಡೆದ ಈ ಶಿಬಿರಗಳಲ್ಲಿ ೯೯೦ ಮಂದಿ ಅಧ್ಯಾಪಕರು ಹಾಗೂ ೭೦ ಮಂದಿ ಪ್ರಾಂಶುಪಾಲರುಗಳು ಭಾಗವಹಿಸಿದ್ದರು.

**ಸ್ವಚ್ಛ ಭಾರತ ಅಭಿಯಾನ:** **ಬಂಕುರಾ ಆಶ್ರಮ**ವು ಆಗಸ್ಟ್ ೧೩ರಂದು ನಡೆಸಿದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಆವರಣವನ್ನು ಸ್ವಚ್ಛಗೊಳಿಸಲಾಯಿತು. **ಕೊಯಮತ್ತೂರು ಮಿಷನ್ ವಿದ್ಯಾಲಯ**ವು ಆಗಸ್ಟ್ ೧ರಿಂದ ೧೨ರ ವರೆಗೆ ನಾಲ್ಕು ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸಿದ್ದು, ವಿದ್ಯಾಲಯದ ವಿದ್ಯಾರ್ಥಿಗಳು ಕೆಲವು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸಿದರು. ಇದರಲ್ಲಿ ಒಂದು ದೇವಾಲಯವೂ ಸೇರಿತ್ತು. **ಮೈಸೂರು ರಾಮಕೃಷ್ಣ ಆಶ್ರಮ**ವು ಆಗಸ್ಟ್ ೬, ೨೦, ೨೭ರಂದು ಮೂರು ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸಿತು. ನಗರದ ವಿವಿಧ ಪ್ರದೇಶಗಳಲ್ಲಿ ಸ್ವಯಂಸೇವಕರ ದೊಡ್ಡ ತಂಡ ಭಾಗವಹಿಸಿತ್ತು. ಪ್ರದೇಶಗಳನ್ನು ಸ್ವಚ್ಛಗೊಳಿಸುವುದರೊಂದಿಗೆ ಸ್ವಯಂಸೇವಕರು ಹಲವು ಮನೆಗಳಿಗೆ ಹಾಗೂ ವಾಣಿಜ್ಯ ಸಂಕೀರ್ಣಗಳಿಗೆ ಭೇಟಿಯಿತ್ತು, ಜನರಿಗೆ ಸ್ವಚ್ಛತೆಯ ಅರಿವನ್ನು ಮೂಡಿಸಲು ಪ್ರಯತ್ನಿಸಿದರು.

Managing Editor : Swami Atmajnananda Editor : Swami Jnanayogananda

Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020